ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಶುಕ್ರವಾರ, ದಿನಾಂಕ : 13 ನೇ ಮಾರ್ಚ್, 2020

ಗ್ರಾಮ ಪಂಚಾಯತಿಗಳಲ್ಲಿ ಗ್ರಾಮಠಾಣ ಪ್ರದೇಶವನ್ನು ಗುರ್ತಿಸುವ ಬಗ್ಗೆ

ಶ್ರೀ ಎಸ್. ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ ):-

892 (983) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಗ್ರಾಮ ಪಂಚಾಯ್ತಿಗಳಲ್ಲಿ ಗ್ರಾಮಠಾಣ ಪ್ರದೇಶವನ್ನು ಗುರುತಿಸಲು ಗೊತ್ತುಪಡಿಸಿದ ಅಧಿಕಾರಿ ಯಾರು ; ಅವರ ನಿರ್ದಿಷ್ಟ ಜವಾಬ್ದಾರಿಗಳೇನು ;

(ಆ) ಗೊತ್ತುಪಡಿಸಿದ ಅಧಿಕಾರಿಗೆ ಗ್ರಾಮೀಣ ಪ್ರದೇಶಗಳ ಆಸ್ತಿಗೆ ಇ- ಸ್ವತ್ತು ಉದ್ಧೃತಭಾಗ ನಮೂನೆ-9, 11ಎ ಮತ್ತು 11ಬಿ ಪಡೆಯುವಾಗ ಗ್ರಾಮೀಣ ಜನತೆಗೆ ಆಗುತ್ತಿರುವ ಅನಾನುಕೂಲಗಳೇನು ; ಗಾಮಠಾಣ ಗುರುತಿಸಲು ಸೂಕ್ತ ಪ್ರಾಧಿಕಾರ ಯಾವುದು ; ಇದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸೂಕ್ತ ಪರಿಹಾರವೇನು ; (ವಿವರ ನೀಡುವುದು)

(ಇ) ಗ್ರಾಮ ಪಂಚಾಯತಿಗಳಲ್ಲಿ ಗ್ರಾಮಠಾಣ ವ್ಯಾಪ್ತಿ ಗುರುತಿಸಿ ಎಷ್ಟು ವರ್ಷಗಳಾಗಿವೆ ; (ವಿವರ ನೀಡುವುದು)

(ಈ) ಗ್ರಾಮಠಾಣ ವ್ಯಾಪ್ತಿ ಗುರುತಿಸಲು ತುರ್ತಾಗಿ ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು ?